Tumbe International e-Magazine
ISSN : 2581-7728
A Multilanguage Magazine
Issue-1
Volume-2
Jan-June : 2019

# ಬದಲಾ(ಗ)ದ ಹೆಣ್ಣು & ಪುಢಾರಿಗಳು

**ಗಂಗಾಂಬಿಕೆ ಬಿ.ಎನ್.**
ಉಪನ್ಯಾಸಕರು, ಕನ್ನಡ ವಿಭಾಗ,
ಸ.ಪ್ರ.ದ. ಕಾಲೇಜು, ತುಮಕೂರು.
gangambikebn@gmail.com Ph: 8105498121

ಅಂದಿನ ಹೆಣ್ಣು

ಮಣ್ಣಿನ ಮಡಕೆಯಂತೆ ಬಲು ನಾಜೂಕು

ಆದರೂ....... ಮಡಕೆಗೆ ಸ್ವಾತಂತ್ರವಿತ್ತು !

ಉರಿ ಜೋರಾದಾಗ ಕುದಿದು ಉಕ್ಕಲು

ಅನಿಸಿದ್ದನ್ನು ಕಕ್ಕಲು !

ಹೂಂ............. ಇಂದಿನ ಹೆಣ್ಣು

ನವನಾಗರೀಕತೆಯ ಜೋಕು ! ಎಲ್ಲ

ಒತ್ತಡವನ್ನು ತನ್ನೊಳಗಿಟ್ಟುಕೊಂಡು

ತಡೆತಡೆದು ಇಷ್ಟಿಷ್ಟೇ ಇಷ್ಟಿಷ್ಟೇ

(ಬಿಸಿ) ಉಸಿರು ಬಿಡಬೇಕು ಕುಕ್ಕರಿನಂತೆ !!

**ಪುಢಾರಿಗಳು**

ರಾಜಕೀಯದವರ ಚಿತ್ತ ಅತ್ತ-ಇತ್ತ
ಒಬ್ಬರೂ ಸಾಗಿಸರು ದೇಶವನು ಪ್ರಗತಿಯತ್ತ
ಬಡವರನು ಉದ್ಧರಿಸುವೆವೆಂದು ಪಣತೊಟ್ಟು !
ಮತ್ತೆ ಮತ್ತೆ ನಡೆಸುವರು ದೇಶವನು ಒಟಿನತ್ತ

ಜನರಾದರೋ ಕಾಯುವರು ಎಂದಾದರೊಂದು ದಿನ !
ಬರುವನು ನಮ್ಮೆಲ್ಲರ ನೆಚ್ಚಿನ ನಾಯಕನೆಂದು
ಅದಕಾಗಿಯೇ ಮತ್ತೆ ಮತ್ತೆ ಮಾಡುವರು ಒಟು
ಆದರವರೋ ಮುಗ್ಧ ಮನಸುಗಳನರಿಯದ ಮೂಢರು